ಉಪವಿಭಾಗಾಧಿಕಾರಿಯ ಕಛೇರಿ ಸ್ಥಾಪನೆ

3 (96) ಶ್ರೀ ಅಪ್ಪಾಜಿ@ಚನ್ನಬಸವರಾಜ್ ಶಂಕರ್‌ರಾವ್ ನಾಡಗೌಡ (ಮುದ್ದೇಬಿಹಾಳ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನಗಳಿಗ ಉತ್ತರಿಸುವರೇ?

ಅ) ವಿಜಾಪುರ ಜಿಲ್ಲೆಯ ಮುದ್ದೇಬಿಹಾಳ ಪಟ್ಟಣಕ್ಕೆ ಉಪವಿಭಾಗಾಧಿಕಾರಿಗಳ ಕಚೇರಿಯನ್ನು ಸ್ಥಾಪಿಸುವ ಉದ್ದೇಶ ಸರ್ಕಾರದ ಮುಂದಿದೆಯೇ,

ಆ) ಉಪವಿಭಾಧಿಕಾರಿ ಕಚೇರಿಗಾಗಿ ಮಿನಿ ವಿಧಾನಸೌಧದಲ್ಲಿ ಸ್ಥಳ ಕಾಯ್ದಿರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಸದರಿ ಕಚೇರಿ ಸ್ಥಾಪನೆಯಿಂದ ತಾಳಿಕೋಟೆ ಬ ಬಾಗೇವಾಡಿ ಹಾಗೂ ಸಿಂದಗಿ ತಾಲ್ಲೂಕಿನ ಸಾರ್ವಜನಿಕರಿಗೆ ಅನುಕೂಲವಾಗಲಿರುವ ಕಾರಣ ದಿಂದ ಉಪವಿಭಾಗಾಧಿಕಾರಿ ಕಚೇರಿಯನ್ನು ಸ್ಥಾಪಿಸಬೇಕೆಂಬ ಬೇಡಿಕ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, (ವಿವರ ನೀಡವುದು)

ಈ) ಹಾಗಿದ್ದಲ್ಲಿ ಯಾವಾಗಿನಿಂದ ಕಚೇರಿಯನ್ನು ಸ್ಥಾಪಿಸಲಾಗುವುದು?

ಶ್ರೀ ವಿ.ಶ್ರೀನಿವಾಸ ಪ್ರಸಾದ್ ಮಾನ್ಯ ಕಂದಾಯ ಸಚಿವರು

ಅ) ಯಾವುದೇ ಪ್ರಸ್ತಾವನೆ ಇಲ್ಲ.

ಆ) ಸ್ಥಳಾವಕಾಶವಿರುತ್ತದೆ

ಇ) ಬಂದಿರುವುದಿಲ್ಲ

ಈ) ಪ್ರಸ್ತಾವನೆ ಇಲ್ಲದೇ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ತಾಲ್ಲೂಕು ಕೇಂದ್ರಗಳ ಸ್ಥಾಪನೆ

4 (54) ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ (ಅರಬಾವಿ) . ಕಂದಾಯ ಸಚಿವರು ಈ ಕೆಳಕಂಡ ಪ್ರಶೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆಯ ನಿಪ್ಪಾಣಿಯು ನಗರಸಭೆಯಾಗಿದ್ದು, ಮೂಡಲಗಿಯು ಪುರಸಭೆಯಾಗಿದ್ದು, ಕಾಗವಾಡ ಮತ್ತು ಕಿತ್ತೂರು ದೊಡ್ಡ ಗ್ರಾಮ ಪಂಚಾಯತ್‌ಗಳಾಗಿರುವುದರಿಂದ ಇವುಗಳನ್ನು ತಾಲ್ಲೂಕು ಕೇಂದ್ರಗಳ ನ್ನಾಗಿ ಹಿಂದಿನ ಸರ್ಕಾರ ಘೋಷಿಸಿರುವುದು ನಿಜವೇ,

ಆ) ಹಾಗಿದ್ದಲ್ಲಿ, ಅವುಗಳ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮ ಗಳೇನು,

ಇ) ಪ್ರಸಕ್ತ ಸಾಲಿನಲ್ಲಿ ನಿಪ್ಪಾಣಿ, ಮೂಡಲಗಿ, ಕಾಗವಾಡ ಮತ್ತು ಕಿತ್ತೂರು ಇವುಗಳನ್ನು ತಾಲ್ಲೂಕು ಕೇಂದ್ರಗಳನ್ನಾಗಿ ಘೋಷಿಸುವ ಪ್ರಸ್ತಾವನೆ ಪ್ರಸ್ತುತ ಸರ್ಕಾರದ ಮುಂದಿದೆಯೇ,

ಈ) ಸದರಿ ಪಟ್ಟಣಗಳು ತಾಲ್ಲೂಕು ಕೇಂದ್ರವಾಗಲು ಎಲ್ಲಾ ಅರ್ಹತೆ ಹೊಂದಿ ದ್ದರೂ ಅನುಷ್ಠಾನಗೊಳಿಸಲು ಸರ್ಕಾರಕ್ಕಿರುವ ತೊಂದರೆಗಳೇನು,

ಉ) ಹಾಗಿದ್ದಲ್ಲಿ, ತಾಲ್ಲೂಕು ಕೇಂದ್ರಗಳನ್ನಾಗಿ ಯಾವಾಗ ಘೋಷಿಸಲಾ ಗುವುದು? (ವಿವರಗಳನ್ನು ನೀಡುವುದು)

ಶ್ರೀ ವಿ.ಶೀನಿವಾಸ ಪ್ರಸಾದ್ (ಕಂದಾಯ ಸಚಿವರು)

ಅ) ಹೌದು ಹಿಂದಿನ ಸರ್ಕಾರವು ಘೋಷಿಸಿರುತ್ತದೆ ಹಾಗೂ ಕಿತ್ತೂರನ್ನು ಸರ್ಕಾರವು ಅಧಿಸೂಚನೆ ಸಂಖ್ಯೆ. ಕಂಇ 09 ಭೂದಾಪು 2012, ದಿನಾಂಕ 15-03-2013ರ ಮೂಲಕ ತಾಲ್ಲೂಕೆಂದು ಘೋಷಿಸಿದೆ.

ಆ) ಕಿತ್ತೂರಿಗೆ ಸಂಬಂಧಿಸಿದಂತೆ ತಾಲ್ಲೂಕು ಮಟ್ಟದ ಕಛೇರಿಗಳ ಸ್ಥಾಪನೆಗೆ ಹಾಗೂ ಸದರಿ ಕಛೇರಿಗಳ ಹುದ್ದೆಗಳಿಗೆ ಸಂಬಂಧಿಸಿದಂತೆ ತಗಲ ಬಹುದಾದ ಅಂದಾಜು ವೆಚ್ಚವನ್ನು ಸರ್ಕಾರಕ್ಕೆ ಕಳುಹಿಸುವಂತೆ ಜಿಲ್ಲಾ ಧಿಕಾರಿಗಳು, ಬೆಳಗಾವಿ ಜಿಲ್ಲೆ ಇವರಿಗೆ ದಿನಾಂಕ 01-08-2013 ರಂದು ಪತ್ರ ಬರೆಯಲಾಗಿದೆ ಅವರಿಂದ ಮಾಹಿತಿ ಬಂದ ನಂತರ ಹಂತ ಹಂತವಾಗಿ, ಹೊಸ ತಾಲ್ಲೂಕುಗಳನ್ನು ರಚಿಸುವ ಬಗ್ಗೆ ಕ್ರಮ ಕೈಗೊಳ್ಳ ಲಾಗುವುದು.

ಇ&ಈ&ಉ) ಈಗಾಗಲೇ ಕಿತ್ತೂರನ್ನು ತಾಲ್ಲೂಕನ್ನಾಗಿ ಘೋಷಿಸಲಾಗಿರುತ್ತದೆ ಮೂಡಲಗಿ, ಕಾಗವಾಡ ಮತ್ತು ನಿಪ್ಪಾಣಿ ಪಟ್ಟಣಗಳನ್ನು ಹೊಸ ತಾಲ್ಲೂಕುಗಳೆಂದು ಘೋಷಿಸಲು ಎಂ.ಬಿ ಪ್ರಕಾಶ್ ಸಮಿತಿ ಶಿಫಾರಸ್ಸು ಮಾಡಿರುತ್ತದೆ. ರಾಜ್ಯದ ಹಣಕಾಸಿನ ಅನುಕೂಲತೆಯನ್ನು ಗಮನ ದಲ್ಲಿಟ್ಟುಕೊಂಡು ಹಂತ ಹಂತವಾಗಿ ಹೊಸ ತಾಲ್ಲೂಕುಗಳನ್ನು ರಚಿಸುವ ಬಗ್ಗೆ ಕೈಗೊಳ್ಳಲು ಆಯವ್ಯಯ ಭಾಷಣದಲ್ಲಿ ನಿರ್ಣಯಿಸಲಾಗಿದೆ

ಎಸ್.ಸಿ ಪಿ/ಟಿ ಎಸ್ ಸಿ. ಯೋಜನೆಗಳಡಿ ಕಾಂಕ್ರೇಟ್ ರಸ್ತೆ ಮತ್ತು ಒಳಚರಂಡಿ ನಿರ್ಮಾಣ

5 (55) ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ (ಅರಭಾವಿ)

ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 2011-12 ನೇ ಸಾಲಿನಲ್ಲಿ ಎಸ್‌ಸಿಪಿ/ಟಿಎಸ್‌ಪಿ ಯೋಜನೆಯಡಿ ಗೋಕಾಕ ತಾಲ್ಲೂಕಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕಾಲೋನಿ ಗಳಲ್ಲಿ ಕಾಂಕ್ರಿಟ್ ರಸ್ತೆ ಮತ್ತು ಚರಂಡಿ ನಿರ್ಮಾಣ ಮಾಡಲು ಮಂಜೂರಾಗಿರುವ ಮೊತ್ತವೆಷ್ಟು (ವಿವರಗಳನ್ನು ನೀಡುವುದು)

ಆ) ಈ ಯೋಜನೆಯಡಿ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಮತ್ತು ಈ ಕಾಮಗಾರಿಗಳ ಪ್ರಗತಿಯು ಯಾವ ಹಂತದಲ್ಲಿದೆ.

ಇ) ಈ ಯೋಜನೆಯಡಿ ಕೆಲವು ಕಾಮಗಾರಿಗಳು ಅಪೂರ್ಣವಾಗಿರುವುದು ಸಹಕಾರದ ಗಮನಕ್ಕೆ ಬಂದಿದೆಯೇ,

ಈ) ಹಾಗಿದ್ದಲ್ಲಿ ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅನುದಾನದ ಕೊರತೆಯೇನಾದರೂ ಇದೆಯೇ.

ಉ) ಹಾಗಿದ್ದಲ್ಲಿ ಕೊರತೆ ಇರುವ ಅನು-ದಾನವನ್ನು ಇದುವರೆವಿಗೆ ಬಿಡು ಗಡೆ ಮಾಡದಿರಲು ಕಾರಣಗಳೇನು